# ಲಘು ಪ್ರಕಟಣೆ ಭಾಗ – 2

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

**ಶನಿವಾರ, ದಿನಾಂಕ 21ನೇ ಆಕ್ಟೋಬರ್, 2017**

**ಸಂಖ್ಯೆ: 33**

ವಿಧಾನ ಸೌಧ ಕಟ್ಟಡವು ನಿರ್ಮಾಣಗೊಂಡು 60 ವರ್ಷಗಳು ತುಂಬಿರುವ ಶುಭ ಸಂದರ್ಭದಲ್ಲಿ **"ವಜ್ರ ಮಹೋತ್ಸವ"** ಕಾರ್ಯಕ್ರಮವನ್ನು ದಿನಾಂಕ:25.10.2017ರ ಬುಧವಾರದಂದು ಆಯೋಜಿಸಲಾಗಿದೆ. ಸದರಿ ದಿನದಂದು ಬೆಳಗ್ಗೆ:11.00 ಗಂಟೆಗೆ ವಿಧಾನ ಸಭೆಯ ಸಭಾಂಗಣದಲ್ಲಿ ಭಾರತದ ಘನತೆವೆತ್ತ ರಾಷ್ಟ್ರಪತಿಯವರು ಉಭಯ ಸದನದ ಸದಸ್ಯರುಗಳನ್ನುದ್ದೇಶಿಸಿ ಭಾಷಣ ಮಾಡುವರು. ಕರ್ನಾಟಕ ವಿಧಾನ ಪರಿಷತ್ತಿನ ಮತ್ತು ಕರ್ನಾಟಕ ವಿಧಾನ ಸಭೆಯ ಸದಸ್ಯರುಗಳನ್ನುದ್ದೇಶಿಸಿ ಭಾಷಣ ಮಾಡುವ ಸಂದರ್ಭದಲ್ಲಿ ಮಾನ್ಯ ಸದಸ್ಯರು ಅನುಸರಿಸಬೇಕಾದ ಕಾರ್ಯವಿಧಾನದ ಲಘು ಪ್ರಕಟಣೆಯನ್ನು ಇದರೊಂದಿಗೆ ಲಗತ್ತಿಸಿದೆ.

ಘನತೆವೆತ್ತ ರಾಷ್ಟ್ರಪತಿಯವರ ಭಾಷಣದ ನಂತರ ಆಮಂತ್ರಣ ಪತ್ರಿಕೆಯ ರೀತ್ಯಾ ವಿಧಾನ ಸೌಧದ ಬ್ಯಾಂಕ್ವೆಟ್ ಹಾಲ್ ಮತ್ತು ಗ್ರಾಂಡ್ ಸ್ಟೆಪ್ಸ್‌ನ ವೇದಿಕೆಯ ಮೇಲೆ ಕಾರ್ಯಕ್ರಮಗಳು ಜರುಗುವುದು.

ಎಲ್ಲಾ ಸದಸ್ಯರುಗಳು ಹೆಚ್ಚಿನ ಸಂಖ್ಯೆಯಲ್ಲಿ ವಿಧಾನ ಸೌಧ ಕಟ್ಟಡದ ವಜ್ರ ಮಹೋತ್ಸವ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಮೂಲಕ ಸಮಾರಂಭವನ್ನು ಯಶಸ್ವಿಗೊಳಿಸಲು ಕೋರಲಾಗಿದೆ.

| | |
|---|---|
| **ಕೆ.ಆರ್.ಮಹಾಲಕ್ಷ್ಮಿ** | **ಎಸ್.ಮೂರ್ತಿ** |
| **ಕಾರ್ಯದರ್ಶಿ (I/C)** | **ಕಾರ್ಯದರ್ಶಿ (I/C)** |
| **ಕರ್ನಾಟಕ ವಿಧಾನ ಪರಿಷತ್ತು** | **ಕರ್ನಾಟಕ ವಿಧಾನ ಸಭೆ** |

**ರವರಿಗೆ:**

**ಕರ್ನಾಟಕ ವಿಧಾನ ಪರಿಷತ್ತಿನ/ ವಿಧಾನ ಸಭೆಯ ಎಲ್ಲಾ ಮಾನ್ಯ ಸದಸ್ಯರುಗಳಿಗೆ.**

## **ಕರ್ನಾಟಕ ವಿಧಾನ ಮಂಡಲ**

ಲಘು ಪ್ರಕಟಣೆ ಭಾಗ – 2

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

ಶನಿವಾರ, ದಿನಾಂಕ:21ನೇ ಅಕ್ಟೋಬರ್, 2017

**ಸಂಖ್ಯೆ: 34**

**ವಿಧಾನಸೌಧ ಕಟ್ಟಡವು ನಿರ್ಮಾಣಗೊಂಡು 60 ವರ್ಷಗಳು ತುಂಬಿರುವ ಪ್ರಯುಕ್ತ ಆಯೋಜಿಸಲಾಗಿರುವ ವಜ್ರ ಮಹೋತ್ಸವದ ಆಚರಣೆಯ ಶುಭ ಸಂದರ್ಭದಲ್ಲಿ ವಿಧಾನಸಭೆಯ ಸಭಾಂಗಣದಲ್ಲಿ ಭಾರತದ ಘನತೆವೆತ್ತ ರಾಷ್ಟ್ರಪತಿಯವರ ಭಾಷಣ.**

ಭಾರತದ ಘನತೆವೆತ್ತ ರಾಷ್ಟ್ರಪತಿಯವರು 25ನೇ ಅಕ್ಟೋಬರ್, 2017ರ ಬುಧವಾರದಂದು ಬೆಳಗ್ಗೆ 11.00 ಗಂಟೆಗೆ ಬೆಂಗಳೂರಿನ ವಿಧಾನಸೌಧದ ವಿಧಾನ ಸಭೆಯ ಸಭಾಂಗಣದಲ್ಲಿ ವಿಧಾನ ಮಂಡಲದ ಉಭಯ ಸದನಗಳ ಸದಸ್ಯರುಗಳನ್ನು ಉದ್ದೇಶಿಸಿ ಭಾಷಣ ಮಾಡುವರೆಂದು ಮಾನ್ಯ ಸದಸ್ಯರುಗಳಿಗೆ ಈ ಮೂಲಕ ತಿಳಿಯಪಡಿಸಲಾಗಿದೆ. ಕಾರ್ಯಕ್ರಮ ಮುಕ್ತಾಯವಾದ ಕೂಡಲೇ ಘನತೆವೆತ್ತ ರಾಷ್ಟ್ರಪತಿಯವರು ಸಭಾಂಗಣದಿಂದ ತೆರಳುವರು. ಮಾನ್ಯ ಸದಸ್ಯರುಗಳು ಕೂಡ ನಿರ್ಗಮಿಸುವರು.

**ಕರ್ನಾಟಕ ವಿಧಾನ ಪರಿಷತ್ತಿನ ಮತ್ತು ಕರ್ನಾಟಕ ವಿಧಾನ ಸಭೆಯ ಸದಸ್ಯರನ್ನುದ್ದೇಶಿಸಿ, ಘನತೆವೆತ್ತ ರಾಷ್ಟ್ರಪತಿಯವರು ಭಾಷಣ ಮಾಡುವ ಸಂದರ್ಭದಲ್ಲಿ ಸದಸ್ಯರು ಅನುಸರಿಸಬೇಕಾದ ವಿಧಾನ:-**

ಘನತೆವೆತ್ತ ರಾಷ್ಟ್ರಪತಿಯವರು ಹಾಗೂ ಘನತೆವೆತ್ತ ರಾಜ್ಯಪಾಲರು ಬೆಳಗ್ಗೆ 10.55 ಗಂಟೆಗೆ ವಿಧಾನಸೌಧದ ಮಹಾದ್ವಾರದ ಬೃಹತ್ ಮೆಟ್ಟಿಲುಗಳ ಬಳಿಗೆ ಆಗಮಿಸುವರು. ಘನತೆವೆತ್ತ ರಾಷ್ಟ್ರಪತಿಯವರು ಮತ್ತು ಘನತೆವೆತ್ತ ರಾಜ್ಯಪಾಲರು ಕಾರಿನಿಂದ ಇಳಿದ ಬಳಿಕ ಅವರನ್ನು ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರು, ವಿಧಾನ ಸಭೆಯ ಮಾನ್ಯ ಸಭಾಧ್ಯಕ್ಷರು, ಮಾನ್ಯ ಮುಖ್ಯಮಂತ್ರಿಯವರು, ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಹಾಗೂ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯದರ್ಶಿಯವರು ಮತ್ತು ಕರ್ನಾಟಕ ವಿಧಾನ ಸಭೆಯ ಕಾರ್ಯದರ್ಶಿಯವರು ಸ್ವಾಗತಿಸುವರು.

ಮುಖ್ಯ ಪ್ರವೇಶದ್ವಾರದಲ್ಲಿ ಈ ಕೆಳಕಂಡ ಕ್ರಮದಲ್ಲಿ ಮೆರವಣಿಗೆಯನ್ನು ರೂಪಿಸಲಾಗುವುದು.

| | |
|---|---|
| **ಕಾರ್ಯದರ್ಶಿ(ಪ್ರ)**<br>**ವಿಧಾನ ಸಭೆ** | **ಕಾರ್ಯದರ್ಶಿ(ಪ್ರ)**<br>**ವಿಧಾನ ಪರಿಷತ್ತು** |
| **ಮಾನ್ಯ ಸಭಾಧ್ಯಕ್ಷರು** | **ಮಾನ್ಯ ಸಭಾಪತಿಯವರು** |

**ಘನತೆವೆತ್ತ ರಾಷ್ಟ್ರಪತಿಗಳು**
**ಎ.ಡಿ.ಸಿ.**

**ಘನತೆವೆತ್ತ ರಾಜ್ಯಪಾಲರು**
**ಎ.ಡಿ.ಸಿ.**

| | |
|---|---|
| **ಮಾನ್ಯ ಮುಖ್ಯ ಮಂತ್ರಿಯವರು** | **ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು** |

ಈ ಮೆರವಣಿಗೆಯು ವಿಧಾನ ಸಭೆಯ ಸಭಾಂಗಣ ಕಡೆಗೆ ತಿರುಗುವುದು. ಸಭಾಂಗಣದ ದ್ವಾರದ ಬಳಿ ಮೆರವಣಿಗೆ ಬಂದ ಕೂಡಲೇ, ಘನತೆವೆತ್ತ ರಾಷ್ಟ್ರಪತಿಗಳ ಹಾಗೂ ಘನತೆವೆತ್ತ ರಾಜ್ಯಪಾಲರ ಆಗಮನವನ್ನು ಸಭೆಗೆ ದಂಡನಾಯಕರವರು ತಿಳಿಸುವರು. ಘನತೆವೆತ್ತ ರಾಷ್ಟ್ರಪತಿಯವರು ಹಾಗೂ ಘನತೆವೆತ್ತ ರಾಜ್ಯಪಾಲರು ವೇದಿಕೆಯ ಮೇಲೆ ಆಸೀನರಾಗುವವರೆಗೆ ಮಾನ್ಯ ಸದಸ್ಯರುಗಳು ಎದ್ದು ನಿಂತು ಕೊಂಡಿರಬೇಕೆಂದು ಕೋರಲಾಗಿದೆ. ಮೆರವಣಿಗೆಯು ವೇದಿಕೆಯ ಕಡೆ ತೆರಳುವುದು. ಸಭಾ ಭವನದ ವೇದಿಕೆಯ ಮುಂದೆ ಬಂದ ಬಳಿಕ ಮೆರವಣಿಗೆಯು ಇಬ್ಭಾಗವಾಗುವುದು. ಘನತೆವೆತ್ತ ರಾಷ್ಟ್ರಪತಿಯವರು ಹಾಗೂ ಘನತೆವೆತ್ತ ರಾಜ್ಯಪಾಲರು ವೇದಿಕೆಯ ಮೇಲಿರುವ ತಮ್ಮ ಆಸನವನ್ನು ತಲುಪಿದ ಕೂಡಲೇ ರಾಷ್ಟ್ರಗೀತೆಯನ್ನು ನುಡಿಸಲಾಗುವುದು. **ವೇದಿಕೆಯ ಮೇಲೆ ಘನತೆವೆತ್ತ ರಾಷ್ಟ್ರಪತಿಯವರ ಎಡ ಭಾಗದಲ್ಲಿ ಘನತೆವೆತ್ತ ರಾಜ್ಯಪಾಲರು ಹಾಗೂ ಮಾನ್ಯ ಸಭಾಪತಿಯವರು ಹಾಗೂ ಘನತೆವೆತ್ತ ರಾಷ್ಟ್ರಪತಿಯವರ ಬಲ ಭಾಗದಲ್ಲಿ ಮಾನ್ಯ ಸಭಾಧ್ಯಕ್ಷರವರು ಆಸೀನರಾಗುವರು**. ಕಾರ್ಯದರ್ಶಿಗಳು ವೇದಿಕೆಯ ಮುಂದೆ ಇರುವ ಆಸನದಲ್ಲಿ ಕುಳಿತುಕೊಳ್ಳುವರು. ಆ ನಂತರ ಘನತೆವೆತ್ತ ರಾಷ್ಟ್ರಪತಿಯವರು ಸಭೆಯನ್ನುದ್ದೇಶಿಸಿ ಭಾಷಣವನ್ನು ಮಾಡುವರು.

**ಸದಸ್ಯರುಗಳನ್ನುದ್ದೇಶಿಸಿ ಘನತೆವೆತ್ತ ರಾಷ್ಟ್ರಪತಿಯವರು ಭಾಷಣ ಪ್ರಾರಂಭಿಸುವುದಕ್ಕೆ ಮೊದಲು ಅಥವಾ ಭಾಷಣ ಪ್ರಾರಂಭಿಸುವಾಗ ಅಥವಾ ಭಾಷಣ ಮಾಡುತ್ತಿರುವಾಗ ಅಥವಾ ಭಾಷಣ ಮುಗಿಸಿದ ನಂತರ ಯಾವ ಸದಸ್ಯರಾಗಲಿ ಭಾಷಣ ಮಾಡುವುದರ ಕ್ರಿಯಾಲೋಪ ಸೂಚಿಸುವುದರ, ಸಭಾತ್ಯಾಗ ಮಾಡುವುದರ ಮೂಲಕವಾಗಿ ಅಥವಾ ಇನ್ಯಾವುದೇ ವಿಧದಿಂದ ಅಡ್ಡಿ ಅಥವಾ ಅಡಚಣೆಗಳನ್ನು ಮಾಡದಿರುವುದು ಸಂಪ್ರದಾಯವಾಗಿದೆ. ಘನತೆವೆತ್ತ ರಾಷ್ಟ್ರಪತಿಯವರ ಭಾಷಣದ ನಂತರ ರಾಷ್ಟ್ರಗೀತೆಯನ್ನು ಪುನಃ ನುಡಿಸಲಾಗುವುದು**.

ಘನತೆವೆತ್ತ ರಾಷ್ಟ್ರಪತಿಯವರು ಹಾಗೂ ಘನತೆವೆತ್ತ ರಾಜ್ಯಪಾಲರು ಮೆರವಣಿಗೆಯಲ್ಲಿ ಸಭಾಂಗಣವನ್ನು ಪ್ರವೇಶಿಸಿದ ರೀತಿಯಲ್ಲಿಯೇ ಸಭಾಂಗಣದಿಂದ ತೆರಳುವರು. ಮೆರವಣಿಗೆಯು ಮುಖ್ಯ ಪ್ರವೇಶದ್ವಾರದಲ್ಲಿ ಮುಕ್ತಾಯವಾಗುವುದು. ನಂತರ ಮಾನ್ಯ ಸಭಾಪತಿಯವರು, ಮಾನ್ಯ ಸಭಾಧ್ಯಕ್ಷರು, ಮಾನ್ಯ ಮುಖ್ಯಮಂತ್ರಿಯವರು, ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಹಾಗೂ ಕಾರ್ಯದರ್ಶಿಗಳು ಘನತೆವೆತ್ತ ರಾಷ್ಟ್ರಪತಿಯವರು ಹಾಗೂ ಘನತೆವೆತ್ತ ರಾಜ್ಯಪಾಲರನ್ನು ಬೀಳ್ಕೊಡುವರು.

ಘನತೆವೆತ್ತ ರಾಷ್ಟ್ರಪತಿಯವರು ಹಾಗೂ ಘನತೆವೆತ್ತ ರಾಜ್ಯಪಾಲರು ಸಭಾಂಗಣದಿಂದ ತೆರಳುವವರೆಗೆ ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತಿರಬೇಕು.

| | |
|---|---|
| **ಕೆ.ಆರ್. ಮಹಾಲಕ್ಷ್ಮಿ** | **ಎಸ್. ಮೂರ್ತಿ** |
| ಕಾರ್ಯದರ್ಶಿ (ಪ್ರ) | ಕಾರ್ಯದರ್ಶಿ(ಪ್ರ) |
| ಕರ್ನಾಟಕ ವಿಧಾನ ಪರಿಷತ್ತು | ಕರ್ನಾಟಕ ವಿಧಾನ ಸಭೆ |

**ಗೆ:**

**ಕರ್ನಾಟಕ ವಿಧಾನ ಪರಿಷತ್ತಿನ/ಕರ್ನಾಟಕ ವಿಧಾನ ಸಭೆಯ ಎಲ್ಲಾ ಮಾನ್ಯ ಸದಸ್ಯರುಗಳಿಗೆ.**